## ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ
## ಸಿ.ಆರ್.ಎಂ.ಸಿ. ನಂಃ111/2020

ಪಿಡಬ್ಲ್ಯುಃ 1

**ದಿನಾಂಕಃ 15.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎನ್.ಹೆಚ್.ಎಫ್. ವಕೀಲರಿಂದ**

ದಿಃ 7.1.2018 ಇಸವಿಯಲ್ಲಿ ನನ್ನ ಹಾಗೂ ಎದುರು ಅರ್ಜಿದಾರರ ಮಧ್ಯ ಮದುವೆ ಆಗಿರುತ್ತದೆ ಎಂದರೆ ಸರಿ. ನಾನು ಪದವೀಧರೆ. 2018 ರಲ್ಲಿ ನನ್ನ ಪದವಿ ಪಡೆದಿರುತ್ತೇನೆ. ಯಾವ ತಿಂಗಳಿನಲ್ಲಿ ನನ್ನ ಅಂತಿಮ ವರ್ಷ ಪದವಿ ಪರೀಕ್ಷೆ ನಡೆದಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು 6ನೇ ಸೆಮಿಸ್ಟರ್ ಅನ್ನು ಮೊದಲನೆ ಪ್ರಯತ್ನದಲ್ಲಿ ಪಾಸಾಗಿರುತ್ತೇನೆ. 1ನೇ ಹಾಗೂ 5ನೇ ಸೆಮಿಸ್ಟರ್ ಅನ್ನು ಮೊದಲನೆ ಪ್ರಯತ್ನದಲ್ಲಿ ಪಾಸಾಗಿರುತ್ತೇನೆ. ಉಳಿದ ಸೆಮಿಸ್ಟರ್ ನ ಬಗ್ಗೆ ನನಗೆ ನೆನಪಿಲ್ಲ. ಅವುಗಳನ್ನು ಮರು ಪರೀಕ್ಷೆ ಬರೆದು ಉತ್ತೀರ್ಣಳಾಗಿರುತ್ತೇನೆ. ನಾನು ಪದವಿ ಪಡೆದ ನಂತರ ಕೆಲಸಕ್ಕೆ ಪ್ರಯತ್ನ ಪಟ್ಟಿರುವುದಿಲ್ಲ ಏಕೆಂದರೆ ನನ್ನ ಅಂಕಪಟ್ಟಿಗಳು ಎದುರು ಅರ್ಜಿದಾರರ ಮನೆಯಲ್ಲಿ ಇರುತ್ತದೆ. ಎದುರು ಅರ್ಜಿದಾರರ ಮನೆಯಿಂದ ನನ್ನ ಮನೆಗೆ ಜುಲೈ 2020 ನೇ ಇಸವಿಯಲ್ಲಿ ಬಂದಿರುತ್ತೇನೆ. ನಿಖರವಾದ ದಿನಾಂಕ ನೆನಪಿಲ್ಲ. ಜುಲೈ ತಿಂಗಳು ಇರಬಹುದು. ನನ್ನ ತಂದೆ ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಅದರಲ್ಲಿ ನನ್ನ ತಂದೆ ಆದಾಯ ಎಷ್ಟು ಎಂದು ತೋರಿಸಿದ್ದಾರೋ ನನಗೆ ಗೊತ್ತಿಲ್ಲ. ಅದರಲ್ಲಿ ಕುಟುಂಬದ ಆದಾಯ ಎಷ್ಟು ಎಂದು ತೋರಿಸಿದ್ದಾರೋ ನನಗೆ ಗೊತ್ತಿಲ್ಲ. ನನ್ನ ತಂದೆಯ ದಿನದ ಆದಾಯ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಅಂದಾಜು 4 ರಿಂದ 5 ವರ್ಷಗಳಿಂದ ಕ್ಯಾಂಟೀನ್ ಅನ್ನು ಹೊಂದಿದ್ದರು. ಕ್ಯಾಂಟೀನ್ ನ ಅಳತೆ ಹೇಳಲು ಸಾಧ್ಯವಿಲ್ಲ. ಸಾಕ್ಷಿ ಮುಂದುವರೆದು ಕ್ಯಾಂಟೀನ್‌ಗೆ ಹೋಗಿರುತ್ತೇನೆ ಅದರ ಅಳತೆ ನನಗೆ ಗೊತ್ತಿರುವುದಿಲ್ಲ. 2017ನೇ ಇಸವಿಯಲ್ಲಿ ಕ್ಯಾಂಟೀನ್ ನಲ್ಲಿ ಎಷ್ಟು ಕೋಣೆಗಳು ಇದ್ದವು ಎಂದು ನನಗೆ ನೆನಪಿಲ್ಲ. ನನ್ನ ತಂದೆ 10ನೇ ತರಗತಿ ವಿದ್ಯಾಭ್ಯಾಸ ಮಾಡಿರಬಹುದು ಅಥವಾ ಪಿಯುಸಿ ಓದಿರಬಹುದು. ನನ್ನ ತಾಯಿ ಗೃಹಿಣಿ. ನನ್ನ ತಾಯಿ 8 ಅಥವಾ 9ನೇ ತರಗತಿ ಓದಿರಬಹುದು. ನನ್ನ ತಾಯಿ ಯಾವುದೇ ಕೆಲಸ ಮಾಡುವುದಿಲ್ಲ. ನಾವು 4 ಜನ ಮಕ್ಕಳು 3 ಹೆಣ್ಣು, 1 ಗಂಡು ಮಕ್ಕಳಿದ್ದೇವೆ. ಮೂರು ಜನ ಹೆಣ್ಣು ಮಕ್ಕಳು ಮದುವೆಯಾಗಿದ್ದೇವೆ. ನಾನು 3ನೇ ಮಗಳಾಗಿರುತ್ತೇನೆ. ಮೊದಲನೆ ಅಕ್ಕನ ಮದುವೆ ಯಾವಾಗ ಆಗಿದ್ದು ಎಂದು ನನಗೆ ನೆನಪಿಲ್ಲ. 2ನೇ ಅಕ್ಕನ ಮದುವೆ 2012 ಅಥವಾ 2013 ನೇ ವರ್ಷ ಆಗಿರಬಹುದು. ನನ್ನ ತಮ್ಮ ಈಗ ದುಬೈನಲ್ಲಿ ಕೆಲಸದಲ್ಲಿದ್ದಾನೆ. ಆತನ ಸಂಬಳ ನನಗೆ ಗೊತ್ತಿಲ್ಲ. 2 ವರ್ಷಗಳ ಹಿಂದೆ ಅವನು ದುಬೈಗೆ ಹೋಗಿರುತ್ತಾನೆ. ಆತ ಬಿಕಾಂ ಪದವೀಧರ. ವಿರಾಜಪೇಟೆಯಲ್ಲಿ ಇದ್ದವರು ಮನೆಯಿಂದ ಕೆಲಸ ಮಾಡಿದರೆ ತಿಂಗಳಿಗೆ 10 ರಿಂದ 15 ಸಾವಿರ ರೂ. ಗಳಿಸಬಹುದು ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಮಾನಸಿಕವಾಗಿ ಹಿಂಸೆ ಆಗಿರುತ್ತದೆ. ಸಾಕ್ಷಿ ಮುಂದುವರೆದು ಎದುರು ಅರ್ಜಿದಾರರ ಮನೆಯಲ್ಲಿ ಇದ್ದಾಗ ಮನೆಯಿಂದ ಕಂಪನಿಗೆ ಕೆಲಸ ಮಾಡಿರುತ್ತೇನೆ. 6 ತಿಂಗಳಿಗೆ ನನಗೆ 2000 ರೂ. ಬಂದಿರಬಹುದು. ಕಂಪ್ಯೂಟರ್ ನಲ್ಲಿ ಕ್ಯಾಪ್ ಚಾ ಮಾಡುವ ಕೆಲಸ ಅದಾಗಿತ್ತು. ಆ ಕಂಪನಿಯೊಂದಿಗೆ ಕೆಲಸದ ಒಪ್ಪಂದ ಮಾಡಿಕೊಂಡಿದ್ದೆ

ಎಂದರೆ ಸರಿಯಲ್ಲ. ನನಗೆ ಹಣ ಬ್ಯಾಂಕ್ ಮುಖಾಂತರ ಬರುತ್ತಿತ್ತು ಎಂದರೆ ನಾನು ನನ್ನ ಖಾತೆಯಲ್ಲು ಪರೀಕ್ಷಿಸಿರುವುದಿಲ್ಲ. ನನಗೆ ಕೆನರಾ ಬ್ಯಾಂಕ್ ವಿರಾಜಪೇಟೆಯಲ್ಲಿ ಖಾತೆ ಇದೆ. ಅದಕ್ಕೆ ಮೊದಲು ನನ್ನ ಬಳಿ ವಿಜಯಾ ಬ್ಯಾಂಕಿನಲ್ಲಿ ಖಾತೆ ಇತ್ತು. ಸದರಿ ಖಾತೆ ಹೇಳಿಕೆಗಳು ನನ್ನ ಗಂಡನ ಮನೆಯಲ್ಲಿ ಇರುತ್ತದೆ. ದಿಃ 13.11.2020 ರಂದು ಎದುರುದಾರರ ಮನೆಗೆ ನನ್ನ ತಾಯಿ, ನಾನು ಹಾಗೂ 5 ಜನ ಪೋಲಿಸರು, ಹೋಗಿದ್ದೆವು ಎಂದರೆ ಸರಿ. ಆ ದಿನ ನಾನು ನನಗೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ಗಂಡ ಹಾಗೂ ಗಂಡನ ಅಣ್ಣ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಹೋಗುವ ಮೊದಲು ನಮ್ಮ ಮಾವನಿಗೆ ಈ ವಿಷಯವನ್ನು ತಿಳಿಸಿರುತ್ತೇನೆ. ನಾನು ಹಾಗೂ ಪೋಲಿಸರು ಇಬ್ಬರು ಈ ವಿಷಯವನ್ನು ದೂರವಾಣಿ ಮುಖಾಂತರ ತಿಳಿಸಿರುತ್ತೇನೆ. ದೂರವಾಣಿ ಸಂಖ್ಯೆ ನೆನಪಿಲ್ಲ. 2 ರಿಂದ 3 ದಿನ ಮುಂಚಿತವಾಗಿ ನಾನು ಬರುವ ವಿಚಾರವನ್ನು ತಿಳಿಸಿರುತ್ತೇನೆ. ನಾನು ಬರುವ ಉದ್ದೇಶವನ್ನು ಸಹ ತಿಳಿಸಿದ್ದೆ. ಆ ದಿನ ಪೋಲಿಸರು ಮಹಜರು ಮಾಡಿರುವುದಿಲ್ಲ. ಆದರೆ ಪೋಲಿಸರು ವಿಡಿಯೋ ರೆಕಾರ್ಡ್ ಮಾಡಿರುತ್ತಾರೆ. ನನ್ನ ಮಾವನ ಮನೆಯಲ್ಲಿ ನಮಗೆ ಪ್ರತ್ಯೇಕವಾದ ಕೋಣೆ ಇತ್ತು ಎಂದರೆ ಸರಿ. ನನ್ನ ತಾಯಿ ಮನೆಗೆ ಬರುವ ಸಮಯದಲ್ಲಿ ಸದರಿ ರೂಂ ಅನ್ನು ಲಾಕ್ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಜೀವಕ್ಕಾಗಿ ಓಡಿ ಬಂದ ಸಂದರ್ಭದಲ್ಲಿ ಬೀಗ ಹಾಕಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ನಾನು ಆ ದಿನ ಒಬ್ಬಳೆ ಓಡಿಕೊಂಡು ಟೌನ್ ಗೆ ಬಂದಿರುತ್ತೇನೆ. ನನ್ನ ಬಳಿ 200 ರೂಪಾಯಿ ಇದ್ದ ಕಾರಣ ಬಸ್ಸಿನಲ್ಲಿ ಬಂದಿರುತ್ತೇನೆ. ನಾನು ಬೇರೆ ಯಾವುದೇ ವಸ್ತುವನ್ನು ನನ್ನ ಜೊತೆ ತೆಗೆದುಕೊಂಡು ಬಂದಿರುವುದಿಲ್ಲ. ದಿಃ 5.09.2020 ರಂದು ನಾನು ಪೋಲಿಸರಿಗೆ ನೀಡಿದ ದೂರಿನ ಪ್ರತಿ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಆ ರೀತಿ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಆದರೆ ಅದನ್ನು ಹಾಜರು ಮಾಡುವುದಿಲ್ಲ. ಏಕೆಂದರೆ ಅದಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ. ಸದರಿ ದೂರನ್ನು ಸುಹೇಲ್ ಎಂಬುವರ ವಿರುದ್ಧ ನೀಡಿರುತ್ತೇನೆ. ಆತ ನನ್ನ ದೂರದ ಸಂಬಂಧಿ. ಆತ ಗುಂಡಿಗೆರೆ ಗ್ರಾಮದವನು. ಅವರ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ನೆನಪಿಲ್ಲ. ಗುಂಡಿಗೆರೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಆತ ನನಗೆ ನಾನು ಕಾಲೇಜಿಗೆ ಹೋಗುತ್ತಿದ್ದಾಗ ಪರಿಚಯವಾಗಿರುತ್ತಾನೆ. ಆತನ ವಿದ್ಯಾಭ್ಯಾಸ ನನಗೆ ಗೊತ್ತಿಲ್ಲ. ನಾನು ಎದುರುದಾರರ ವಿರುದ್ಧ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಓ.ಎಸ್. 56/2020 ರಂತೆ ದಾವೆಯನ್ನು ವಿಚ್ಛೇದನ ಕೋರಿ ಸಲ್ಲಿಸಿರುತ್ತೇನೆ. ಆ ಪ್ರಕರಣ ಈಗಲು ಚಾಲ್ತಿಯಲ್ಲಿದೆ ಎಂದರೆ ಸರಿ.

**ಪಾಟೀ ಸವಾಲುಃ** ಮುಂದಿನ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ. ಸಹಿ/-

ಸಿ. ಮಹಾಲಕ್ಷ್ಮಿ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ